**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ -- 11**

**ಚಾಸಾ – 11**

ಸಾಕ್ಷಿಯ ಹೆಸರು – ಈಶ್ವರ

ತಂದೆಯ ಹೆಸರು – ಕರಿಯಯ್ಯ

ವಯಸ್ಸು – 29 ವರ್ಷ

ವೃತ್ತಿ – ಡ್ರೈವರ್

ವಿಳಾಸ – ಚಪ್ಪರದಳ್ಳಿ

ದಿಃ 28.08.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಪರಿಚಯ ಇದೆ. ನಾನು 2 ವರ್ಷಗಳ ಹಿಂದೆ ನನ್ನ ಅತ್ತೆಯ ಊರು ಉಡವೆಪುರ ಗ್ರಾಮದಲ್ಲಿ ಆರೋಪಿಯನ್ನು ನೋಡಿದ್ದೆ, ಅವರು ಜೀಪ್ ನಲ್ಲಿ ಅಯ್ಯನಕೆರೆ ಹಾಡಿಯಿಂದ ಬಾಳೆಲೆಗೆ ಕೆಲಸಗಾರರನ್ನು ಕರೆದುಕೊಂಡು ಹೋಗುವ ಕೆಲಸ ಮಾಡುತ್ತಿದ್ದರು. 2020 ರಲ್ಲಿ ಆರೋಪಿ ಶಬರಿಮಲೆಗೆ ಹೋಗಿದ್ದರು. ದಿಃ 02.03.2020 ರಂದು ಅವರು ಶಬರಿಮಲೆಯಿಂದ ಆರೋಪಿ ವಾಪಸ್ಸು ಬಂದಿದ್ದರು. ನಂತರ ಅವರು ಅಯ್ಯನಕೆರೆ ಹಾಡಿಯಿಂದ ಬಾಳೆಲೆಗೆ ಕೆಲಸಗಾರರನ್ನು ಕರೆದುಕೊಂಡು ಹೋಗಲು ಜೀಪ್ ತೆಗೆದುಕೊಂಡು ಹೋಗು ಎಂದು ಹೇಳಿದ್ದು ನಾನು ಆಗುವುದಿಲ್ಲ ಎಂದು ಹೇಳಿದ್ದೆ. ಈ ದಿನ ಕೆಲಸಗಾರರನ್ನು ಕರೆದುಕೊಂಡು ಹೋದ ಬಗ್ಗೆ ಲೆಕ್ಕ ತೀರಿಸಬೇಕು, ನೀನು ಬರಲೇಬೇಕು ಎಂದು ಆರೋಪಿ ನನ್ನಲ್ಲಿ ಹೇಳಿದರು. ಬಾಳೆಲೆಯಿಂದ ಜೀಪನ್ನು ನಾನು ಚಲಾಯಿಸಿಕೊಂಡು ಬಂದಿದ್ದು ತಿತಿಮತಿ ಬಳಿ ಆರೋಪಿ ನನಗೆ ಬೇರೆ ಕೆಲಸ ಇದೆ ಎಂದು ಜೀಪ್ ನಿಂದ ಇಳಿದು ಹೋದರು. ನಾನು ಕೆಲಸಗಾರರನ್ನು ಕರೆದುಕೊಂಡು ಹೋಗಿ ಅಯ್ಯನಕೆರೆ ಹಾಡಿಯಲ್ಲಿ ಬಿಟ್ಟೆ ಜೀಪನ್ನು ಆರೋಪಿಯ ಮನೆಯ ಬಳಿ ತಂದು ನಿಲ್ಲಿಸಿ ನಾನು ನನ್ನ ಮನೆಗೆ ಹೋಗಿರುತ್ತೇನೆ. ಸಂಜೆ ನಾನು ಮನೆಗೆ ಹೋದ ನಂತರ ಲಕ್ಷ್ಮಿ ಎನ್ನುವ ಹುಡುಗಿ ವಿಷ ಸೇವಿಸಿ ಹನಗೋಡು ಆಸ್ಪತ್ರೆಯಲ್ಲಿ ದಾಖಲು ಮಡಿದ್ದಾರೆ ಎಂದು ಗೊತ್ತಾಯಿತು. ಈ ವಿಷಯವನ್ನು ನನಗೆ ಆರೋಪಿ ಹೇಳಿರುವುದಿಲ್ಲ.

ಲಕ್ಷ್ಮಿ ಯಾವ ಕಾರಣಕ್ಕೆ ವಿಷ ಸೇವಿಸಿದ್ದರು ಅಥವಾ ಆಕೆಗೆ ಯಾರು ವಿಷ ಕುಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಂತರ 10 ನೇ ತಾರೀಖಿನಂದು ಲಕ್ಷ್ಮಿ ಮೃತಪಟ್ಟಿರುತ್ತಾರೆ. ನಾನು ಆರೋಪಿ ಶಬರಿಮಲೆಗೆ ಹೋಗಿದ್ದ ಸಮಯದಲ್ಲಿ 3-4 ದಿನ ಜೀಪ್ ನಲ್ಲಿ ಆಳುಗಳನ್ನು ನಾನೇ ಅಯ್ಯನಕೆರೆ ಹಾಡಿಯಿಂದ ಕರೆದುಕೊಂಡು ಬಾಳೆಲೆಗೆ ಹೋಗಿ ಸಂಜೆ ಕೆಲಸ ಆದ ನಂತರ ಬಾಳೆಲೆಯಿಂದ ಅಯ್ಯನಕೆರೆ ಹಾಡಿಗೆ ಕರೆದುಕೊಂಡು ಬಂದಿರುತ್ತೇನೆ. ಆರೋಪಿ ಲಕ್ಷ್ಮಿಯವರಿಗೆ ವಿಷ ಕುಡಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಪೊಲೀಸರ ಸಮಕ್ಷಮ ನಾನು ಹೇಳಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ದಿಃ 03.02.2020 ರಂದು ಮಃ 2.00 ಗಂಟೆಗೆ ಆರೋಪಿ ಜೀಪಿನಲ್ಲಿ ಬಂದು ಈ ದಿನ ಸಂಜೆ ಬಾಳೆಲೆಯಿಂದ ಕೆಲಸದವರನ್ನು ಕರೆದುಕೊಂಡು ಬರಲು ಜೀಪ್ ತೆಗೆದುಕೊಂಡು ಹೋಗು ಎಂದು ಹೇಳಿದಾಗ ನಾನು ಆಗುವುದಿಲ್ಲ ಎಂದು ಹೇಳಿದ್ದ, ಆಗ ಆರೋಪಿಯು ನನ್ನ ಬಳಿ ಲಕ್ಷ್ಮಿ ವಿಷ ಕುಡಿದು ಆಸ್ಪತ್ರೆಯಲ್ಲಿ ಇದ್ದಾಳೆ ನೀನು ಈ ದಿನ ಬರಲೇಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಅದೇ ದಿನ ಸಂಜೆ ನಾನು ಮನೆಗೆ ಹೋದ ನಂತರ ಅಯ್ಯನಕೆರೆ ಹಾಡಿಯ ಲಕ್ಷ್ಮಿ ರವರಿಗೆ ಬಾಳೆಲೆ ಸಮಿಪ ಆರೋಪಪಿಯು ವಿಷ ಕುಡಿಸಿ ಹನಗೋಡು ಆಸ್ಪತ್ರೆಯಲ್ಲಿ ದಾಖಲು ಮಾಡಿರುವ ವಿಷಯ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 25.02.2020 ರಂದು ನನಗೆ ಈಗ ಓದಿ ಹೇಳಿದಂತೆ " ದಿನಾಂಕ 03.02.2020 —— ಹೇಳಿದ" ಹಾಗೂ " ಅದೇ ದಿನ —— ನನಗೆ ತಿಳಿದಿರುತ್ತದೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗಗಳನ್ನು ನಿಪಿ 8 ಎಂದು ಗುರುತಿಸಲಾಯಿತು. ನಿಪಿ 8 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)